ಪ್ರಚಾರ ದಿನಚರಿ– 15 ಏಪ್ರಿಲ್ 2014

ಅರುಣ್ ಜೇಟ್ಲಿ

(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

## ಕಾಂಗ್ರೆಸ್ ಪಕ್ಷದ ಹೊಸ ಘೋಷಣೆ: "ನಾನಲ್ಲ ನಮ್ಮಮ್ಮ"

ಜನಾಭಿಪ್ರಾಯದ ಸಮೀಕ್ಷೆಯನ್ನು ಅಗ್ರಮಾನ್ಯ ಸುದ್ದಿ ವಾಹಿನಿಯೊಂದು ನಿನ್ನೆ ಬಿತ್ತರಿಸಿದೆ. ಈ ಮತಸಮೀಕ್ಷೆ ಪ್ರಕಾರ ಭಾಜಪಗೆ ಸಂಸತ್‌ನಲ್ಲಿ 226 ಸೀಟುಗಳು ಲಭಿಸುವ ಸಂಕೇತವಿದೆ ಹಾಗೂ ಎನ್‌ಡಿಎಗೆ 275 ಸೀಟುಗಳು ಲಭಿಸಿ ಬಹುಮತ ಪಡೆಯಲಿದೆ ಎಂದೂ ಸಹ ಸೂಚಿಸಲಾಗಿದೆ. ಎನ್‌ಡಿಎಗೆ ಸಂಪೂರ್ಣ ಬಹುಮತ ದೊರೆಯುವ ಮೊದಲ ಸಂಕೇತ ಈ ಸಮೀಕ್ಷೆ ನೀಡಿದೆ. ಈ ಸಮೀಕ್ಷೆ ದಿಕ್ಸೂಚಿಯಾಗಿದೆ ಎಂಬ ನಂಬಿಕೆ ನನ್ನದು. ಪ್ರತಿ ಹಂತದ ಚುನಾವಣಾ ದಿನಾಂಕ ಸಮೀಪಿಸಿದಂತೆ, ಬೆಂಬಲದ ಸೆಳೆ ಸ್ಪಷ್ಟವಾಗುತ್ತಿದೆ. ಈ ಮುನ್ಸೂಚನೆ ಬಿಂಬಿಸುವ ಭಾವನೆಗಳೆಂದರೆ, ಕಾಂಗ್ರೆಸ್ ವಿರುದ್ಧದ ಆಕ್ರೋಶ ಹಾಗೂ ಮೋದಿ ಪರ ವಿಶ್ವಾಸ. ಅಗ್ರಸ್ಥಾನದಲ್ಲಿರುವ ಪಕ್ಷವು ಸಮೀಕ್ಷೆಗಿಂತ ಹೆಚ್ಚಿನ ಸ್ಥಾನಗಳನ್ನು ಪಡೆಯುವುದು ಸಹಜ ಎಂಬ ನಂಬಿಕೆ ನನ್ನದು.

ಕಾಂಗ್ರೆಸ್ ಶಕ್ತಿ ಕುಂದಿದಂತೆ ಅದರ ಪ್ರಚಾರ ಕಳೆಗುಂದಿದೆ. ಪ್ರಚಾರ ಗೊಂದಲಮಯವಾಗಿದ್ದು, ಲಯ ಕಳೆದುಕೊಂಡಿದೆ. ಅದರ ಸಂದೇಶ ಸ್ಪಷ್ಟವಾಗಿಲ್ಲ. ಕಾಂಗ್ರೆಸ್ ಪಕ್ಷ ತನ್ನ ನಿಲವನ್ನು ನಿನ್ನೆ ಬದಲಾಯಿಸಿದೆ. ರಾಹುಲ್ ಗಾಂಧಿ ನೇತೃತ್ವದ ಪ್ರಚಾರ ಹಾಗೂ ಅದರ ಜಾಹಿರಾತುಗಳಿಗೆ ದೊರೆತ ಪ್ರಾಮುಖ್ಯತೆ ಗೌಣವಾಗಿವೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸ್ವತಃ ಪ್ರಚಾರಕಾರ್ಯದ ಮುಂದಾಳತ್ವ ವಹಿಸಿಕೊಂಡಿದ್ದಾರೆ. ಎಲ್ಲ ದೃಶ್ಯ ಮಾಧ್ಯಮಗಳಲ್ಲೂ ಸಮಯ ಖರೀದಿಸಿ, ದೇಶವನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ಅವರಲ್ಲಿ ಹತಾಶೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಭಾಷಣಗಳು, ಸಂದರ್ಶನಗಳು ಹಾಗೂ ಪತ್ರಿಕಾಗೋಷ್ಠಿಗಳಲ್ಲಿ ರಾಜಕೀಯ ನಾಯಕರ ಸುತ್ತ ಮಾಧ್ಯಮವರ್ಗ ಆವರಿಸಿರುತ್ತದೆ. ಭಾಷಣ ಜನರಿಗೆ ತಲುಪಿಸಲು ದೃಶ್ಯ ಮಾಧ್ಯಮಗಳಲ್ಲಿ ಸಮಯ ಖರೀದಿಸುವ ಆವಶ್ಯಕತೆ ಏನಿತ್ತು. ಪಕ್ಷದ ಜೇಷ್ಠ ಸಂವಹನಕಾರರ ಸ್ಥಾನವನ್ನು ಮಗನಿಂದ ತಾಯಿಗೆ ವರ್ಗಾಯಿಸುವ ನಿರ್ಧಾರ ಮಾಡಲಾಗಿದೆ. ರಾಹುಲ್ ಗಾಂಧಿ ಅವರ ಭಾಷಣಗಳು ಯಾವುದೇ ಪ್ರತಿಫಲ ನೀಡದ ಕಾರಣ ಅವರಲ್ಲಿದ್ದ ವಿಶ್ವಾಸ ಕಡಿಮೆಯಾಗಿದೆ. ದೃಷ್ಯ ಮಾಧ್ಯಮಗಳಲ್ಲಿ ಕಡೇ ಕ್ಷಣದಲ್ಲಿ ಖರೀದಿಸಿದ ಸಮಯ ಬಳಸಿ, ಮಾಡಿದ ಭಾಷಣದಿಂದ ಚುನಾವಣಾ ವಿಚಾರಧಾರೆಯ ಮೇಲೆ ಯಾವುದೇ ಪ್ರಭಾವವಾಗುವುದಿಲ್ಲ. ಬೆಲೆ ಏರಿಕೆ, ಆರ್ಥವ್ಯವಸ್ಥೆಯ ದುರ್ವ್ಯವಸ್ಥೆ, ಭ್ರಷ್ಟಾಚಾರ, ಪ್ರಧಾನ ಮಂತ್ರಿ ಕಚೇರಿಯ ದುರ್ಬಳಕೆ ಎಲ್ಲವೂ ಭಾರತೀಯತೆ ಅಥವಾ ಹಿಂದುಸ್ತಾನದ ಸಂಸ್ಕೃತಿ ಎನಿಸಲಾರವು. ಆ ಸಂದೇಶಗಳು ಫಲಿಸಲಾರವು. ಖರೀದಿಸಿದ ಸಮಯ ಬಳಸಿ ನಿನ್ನೆ ಸೋನಿಯಾ ಗಾಂಧಿ ಅವರು ದೃಶ್ಯ ಮಾಧ್ಯಮಗಳಲ್ಲಿ ಮಾಡಿದ ಭಾಷಣ ನೀಡುವ ಏಕೈಕ ಸಂದೇಶವೆಂದರೆ, 'ನಾನ್ನಲ್ಲ ನನ್ನಮ್ಮ' ಎಂಬ ಕಾಂಗ್ರೆಸ್ ಪಕ್ಷದ ಹೊಸ ಘೋಷವಾಕ್ಯ.

---